ಪದಬಂಧ




ಎಡದಿಂದ ಬಲಕ್ಕೆ:

1. ಕಳ್ಳನಂತೆ ಕಂಡರೂ ನಿಶ್ಚಯವಾಗಿಯೂ ಯಾವ ದೋಷವೂ ಇಲ್ಲ (4)
3. ಅಲ್ಲಿಂದ ಬರುವ ವೇಳೆಗೆ ಬರೀ ಸೆಕೆ ನೀರು (3)
4. ರಸವಿಲ್ಲದಿದ್ದರೂ ಅದು ಮಾವಿನ ಫಲವೇ ತಾನೇ? (3)
6. ಶುದ್ಧ ಮನಸಿನಿಂದ ನಿರ್ಮಿಸಲಾದ 'ಗಿಣಿಗಳ ಮನೆ' (4)
7. ತೆಳ್ಳಗಿರುವವನಾದರೇನು– ಇದು ಸ್ನೇಹ, ಮಿತ್ರತ್ವ (4)
9. ಎಂಥ ಸೊಗಸು! ಆಕಳಿನ ಮರಿಯಂಥ ಹಸುಳೆ (4)
12. ಆಳಕ್ಕೆ ಇಳಿವವನ ಸುತ್ತ ಸೇವಕರ ಜೊತೆ ಧಾನ್ಯ (4)
14. ಕರೆಸಿದೊಡನೆ ಬಂದವನು ಸಮಾನ ಮಟ್ಟದವ (3)
16. ರಾಣಿಗೆ ಅಣ್ಣ ಇರುವ ಸ್ಥಳ ಯುದ್ಧ ರಂಗ (4)

ಮೇಲಿಂದ ಕೆಳಕ್ಕೆ:

1. ಪರಮಾತ್ಮನಿಗೆ ಯಾವುದೇ ಹೋಲಿಕೆಯೂ ಇಲ್ಲ (4)
2. ಕಾಡಿಗೆ ಹೊರಟವರ ಕೈಯಲ್ಲಿ ಏನೀ ಸುಂದರ ಡಬ್ಬಿ? (4)
3. ಬೇಕರಿಯನ್ನಾರಂಭಿಸುವ ಮೊದಲು ಪೂಜೆಗೊಳಗಾದದ್ದು ಗಣೇಶ (3)
5. ತೇಲಲಿರುವ ವಸ್ತು ಎಷ್ಟು ಸುಂದರ ನೋಡಿ (3)
6. ಶೂರನದು ಸನಿಹ ಇರುವವರೊಡನೆ ಕಲ್ಮಶ ರಹಿತ ಗೆಳೆತನ (4)
8. ನೆಟ್ಟ ಗಿಡ ಉರುಳಿದಾಗ ಮಧ್ಯರಾತ್ರಿಯ ಸಮಯ (4)
10. ಹಾಸ್ಯ ಹರಿಸುವವನದು ಒಳ್ಳೇ ನಗು ತರುವ ಹೆಸರು (3)
11. ಎಷ್ಟು ಸುಂದರಾಕಾರ–ಅಮೃತದ ಆಕರ (4)
12. ಅವರಿವರ ಹಣ ಬಳಸಿಯೇ ಮೇಲೇರಿದ್ದು ಹೀಗೆ (4)
13. ಸಾಕಾಯಿತು ಎನಿಸುವಂತೆ ಬಿಸಿ ಮಾಡು (3)

## 16–04–15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಕೂಲ; 3. ನವಮಿ; 4. ಹಯನ; 6. ತರಾವರಿ; 7. ಸರೋರುಹ; 9. ಸೆಕೆಗಾಲ; 11. ದಾಮೋದರ; 13. ಸುಲೋಚನ; 15. ಅಂಗೀಕಾರ; 17. ಯಯಾತಿ; 18. ವಿರೂಪ; 19. ಮಹಾರಾಜ.

ಮೇಲಿಂದ ಕೆಳಕ್ಕೆ:

1. ಅಮಿತ; 2. ಲಹರಿ; 3. ನವುರು; 5. ನಟಿಕೆ; 7 . ಸರ್ವದಾ; 8. ಹತ್ತಿರ; 9. ಸೆಣಸು; 10. ಲಗುನ; 12. ದಡಿಯ; 14. ಲೋಲಪ; 15. ಅಂತಿಮ; 16. ರವಿಜ (= ಕರ್ಣ).

## ಪ್ರಶ್ನಾಂಕಣ

# ಮಂಗಳ ಪ್ರವಾಸ-ಏಕೆ ದುಸ್ಸಾಹಸ?

ನಮ್ಮ ಸೌರವ್ಯೂಹದಲ್ಲಿ ಭೂಮಿಯ ನಂತರ ಮನುಷ್ಯರಿಗೆ ಅತ್ಯಂತ ಆಸಕ್ತಿದಾಯಕ ಗ್ರಹ 'ಮಂಗಳ.' ಭೂಮಿಯಿಂದ ಸರಾಸರಿ ಎಪ್ಪತ್ತೆಂಟು ದಶಲಕ್ಷ ಕಿ.ಮೀ. ದೂರದಲ್ಲಿರುವ ಈ ಕಾಯ ನಮಗೆ ಅತ್ಯಂತ ಸನಿಹದ ಗ್ರಹ ಕೂಡ. ಭೂ ಗ್ರಹದ ಸುಮಾರು ಅರ್ಧದಷ್ಟು ವ್ಯಾಸದ ಈ ದೃಗ್ಗೋಚರ 'ಕೆಂಪು ಗ್ರಹ' (ಚಿತ್ರ–1) ದೂರದ ಭವಿಷ್ಯದಲ್ಲಿ ಮನುಷ್ಯರ ನೆಲೆಯಾಗುವ ಸಾಧ್ಯತೆ ಇದೆ ಎಂಬುದೇ ಈ ಗ್ರಹದಲ್ಲಿನ ಆಸಕ್ತಿಗೆ ಮುಖ್ಯ ಕಾರಣ. ಆದರೆ ಸದ್ಯದಲ್ಲಂತೂ ಮಂಗಳನಿಗೆ ಯಾನ ಕೈಗೊಳ್ಳುವ, ಅಲ್ಲಿ ಬದುಕುವ, ಹಿಂದಿರುಗಿ ಬರುವ ಕಲ್ಪನೆಗೂ ಮಹಾನ್ ದುಸ್ಸಾಹಸಗಳೇ ಹೌದು ಏಕೆಂದರೆ...

ಮಂಗಳ ಗ್ರಹ ಭೂಮಿಗೆ ಅತ್ಯಂತ ಸನಿಹ ಬಂದಾಗಲೂ ಅದರ ದೂರ ಸಮೀಪ ಐವತ್ತು ದಶಲಕ್ಷ ಕಿ.ಮೀ. ಆಗಿರುತ್ತದೆ. ಸದ್ಯದ ಯಾವುದೇ ವ್ಯೋಮ ವಾಹನದಲ್ಲಿ ಈ ಪಯಣ ಕೈಗೊಂಡರೂ ಮಂಗಳನನ್ನು ತಲುಪಲು ಹಲವಾರು ತಿಂಗಳುಗಳೇ ಬೇಕು. ಅದನ್ನು ಸಹಿಸಿ ಮಂಗಳಗ್ರಹದಲ್ಲಿ ಇಳಿದರೂ ಅಲ್ಲಿಂದ ಭೂಮಿಗೆ ಹಿಂದಿರುಗಿ ಬರುವ ಯಾವ ವ್ಯವಸ್ಥೆಯೂ ಇಲ್ಲ.

ಮಂಗಳನದು ಅತ್ಯಂತ ವಿರಳ ವಾಯುಮಂಡಲ. ಅದರ ಶೇ. 95 ಭಾಗ ಇಂಗಾಲದ ಡೈ ಆಕ್ಸೈಡ್ ಮತ್ತು ಶೇಕಡ 3 ಭಾಗ ಸಾರಜನಕ. ಪ್ರಾಣವಾಯು ಆಮ್ಲಜನಕದ್ದಂತೂ ಶೂನ್ಯಕ್ಕೇ ಸಮೀಪ ಎನಿಸುವಷ್ಟು ಅಲ್ಪಾಂಶ. ಹಾಗಾಗಿ ನೇರ ಉಸಿರಾಟ ಅಲ್ಲಿ ಅಸಾಧ್ಯ. ಅಷ್ಟೇ ಅಲ್ಲದೆ ಮಂಗಳನ ತೆಳ್ಳನ್ನ ದುರ್ಬಲ ವಾತಾವರಣದಿಂದಾಗಿ ಮಂಗಳನಲ್ಲಿ ಅಪಾಯಕಾರೀ ವಿಕಿರಣಗಳಿಂದ, ಕಾಸ್ಮಿಕ್ ಕಿರಣಗಳಿಂದ ಮತ್ತು ಕ್ಷುದ್ರಗ್ರಹ ದಾಳಿಯಿಂದ ಯಾವುದೇ ರಕ್ಷಣೆ ಇಲ್ಲ. ಮಂಗಳ ಗ್ರಹದ ಪರಿಸರದ ಕನಿಷ್ಠ ತಾಪಮಾನ ಶೂನ್ಯಕ್ಕಿಂತ 153 ಡಿಗ್ರಿ ಕಡಿಮೆ. ಜೊತೆಗೆ ಆಗಾಗ ಆಗಸವನ್ನೇ ಮುಚ್ಚುವ ಕೆಂಧೂಳಿನ ಬಿರುಗಾಳಿಗಳು. ಇವೆಲ್ಲ ಕಾರಣಗಳಿಂದ ಧರೆಯಲ್ಲಿರುವಂಥ ಸಹಜ ಸ್ವತಂತ್ರ ನೈಸರ್ಗಿಕ ಹಿತಕರ ಬದುಕು ಮಂಗಳ ಗ್ರಹದಲ್ಲಿ  ಸಾಧ್ಯವೇ ಇಲ್ಲ. ಸದಾಕಾಲ ವಿಶೇಷ ಗುಡಾರಗಳ ಒಳಗೇ ಇರುವ ಅಥವಾ ವಿಶೇಷ ಸೂಟುಗಳನ್ನು ತೊಟ್ಟು, ಅತಿ ವಿಶೇಷ ವಾಹನಗಳಲ್ಲಷ್ಟೇ ಓಡಾಡುವ ಕ್ರಮ ಅನಿವಾರ್ಯ (ಚಿತ್ರ–2,3).




ಮಂಗಳನಲ್ಲಿ ನೀರು ಸಾಕಷ್ಟಿದ್ದರೂ ದ್ರವ ರೂಪದ ನೀರು ಅಲ್ಲಿ ನೇರ ಲಭ್ಯ ಇಲ್ಲ. ಅಲ್ಲಿನ ಮಣ್ಣನ್ನು ರಾಸಾಯನಿಕ ಕ್ರಿಯೆಗಳಿಗೆ ಒಳಪಡಿಸಿ, ನೀರನ್ನು ಪ್ರತ್ಯೇಕಿಸಿ, ಹಾಗೆಯೇ ವಿಶೇಷ 'ಹಸಿರು ಮನೆ'ಗಳನ್ನು ನಿರ್ಮಿಸಿ, ಸ್ವಯಂ ಪರಿಪೂರ್ಣ ಕೃತಕ ಜೀವಾವಾರ ನಿರ್ಮಿಸಿ ಅದರೊಳಗೆ ಬದುಕುವುದೊಂದೇ ಮಂಗಳ ಪ್ರವಾಸಿಗರು ಎದುರಿಸಬಹುದಾದ ದಾರಿ.

ಆದ್ದರಿಂದಲೇ ವಾಸ್ತವದಲ್ಲಿ ಅಸಾಧ್ಯವಾದ ಮಂಗಳ ಪ್ರವಾಸ ಕಲ್ಪನೆಯಲ್ಲೂ ದುಸ್ಸಾಧ್ಯ.

■ ಎನ್. ವಾಸುದೇವ್